ಕನ್ನಡದ ಸ್ವಜಾತಿ ಪತ್ರಿಕೆಯೊಂದಕ್ಕೆ ಆಗಾಗ ಅಂಕಣ ಬರೆಯುತ್ತಿದ್ದ ಸ್ವಾಮಿಗಳು ಮೊದಲೇ ಯೋಚಿಸಿ ಈ ತೀರ್ಮಾನಕ್ಕೆ ಬಂದಂತಿತ್ತು. ಕೇವಲ ಹೂದೋಟ ನೋಡಿಕೊಳ್ಳಲು ಕೆಲಸಗಾರರು ಅಂದರೆ ಆಡಳಿತ ಮಂಡಳಿಯವರಿಗೆ ಗುಮಾನಿ ಬರಬಹುದೆಂದು ಅರಿತು, ಜೊತೆಗೆ ಡಿಟಿಪಿ ಮಾಡುವವರೂ ಬೇಕೆಂದರೆ ತಮ್ಮಿಚ್ಛೆಯಂತೆ 'ಮಹಿಳಾ ಅಭ್ಯರ್ಥಿ' ಎಂದು ಸೇರಿಸಬಹುದೆಂದು ಬಗೆದಿದ್ದರು. ಅದಕ್ಕಾಗೆ ತಮ್ಮ ಆಪ್ತರ ಬಳಿ ಟೈಪಿಸುವವರು ಇಲ್ಲದೆ ಆಗುತ್ತಿರುವ ತೊಡರುಗಳನ್ನ ಒಂಚೂರು ಹೆಚ್ಚೆ ಎಂಬಂತೆ ಆಗಾಗ ಹೇಳಿಕೊಂಡಿದ್ದರು. ಹಾಗೂ ಮೀರಿ ತಲೆಗೆ ಬರುವಂತಾದರೆ 'ಮಹಿಳಾ' ಎಂಬುದು ಮಠದ ವತಿಯಿಂದ ಕೊಟ್ಟದ್ದಲ್ಲ, ಪತ್ರಿಕೆಯವರೇ ಡಿಟಿಪಿ ಎಂದರೆ ಸಾಮಾನ್ಯವಾಗಿ ಮಹಿಳೆ ಎಂಬ ಅರ್ಥದಲ್ಲಿ ಗ್ರಹಿಸಿಕೊಂಡು ಹಾಕಿದ್ದಾರೆಂದು ನುಣಿಚಿಕೊಳ್ಳುವ ಪ್ಲಾನೂ ಅವರದಾಗಿತ್ತು. ಕಣ್ತಪ್ಪಿನಿಂದಾದ ದೋಷವೆಂದಾದರೆ ಪತ್ರಿಕೆಯವರು ತಾವೇ ಸ್ವತಃ ಮೈಮೇಲೆ ಹೊತ್ತುಕೊಳ್ಳುತ್ತಾರೆಂಬ ವಿಶ್ವಾಸವೂ ಶ್ರೀಗಳದ್ದಾಗಿತ್ತು.

